ಯೋಜನೆಯ ಹೆಸರು	ಕೊರೆದ ಕೊಳವೆಬಾವಿಗಳ ಸಂಖ್ಯೆ	ಪಂಪುಸೆಟ್ಟು ಅಳವಡಿಸಿದ ಸಂಖ್ಯೆ	ವಿದ್ಯುದ್ದೀಕರಣ ಗೊಳಿಸಿದ ಸಂಖ್ಯೆ	ಇನ್ನು ಕೊರೆಯ ಬೇಕಾದ ಕೊಳವೆ ಬಾವಿಗಳ ಸಂಖ್ಯೆ
ಗಂಗಾ ಕಲ್ಯಾಣ ಯೋಜನೆ ವೈಯುಕ್ತಿಕ ನೀರಾವರಿ	11069	10690	10117	226
ಕೊಳವೆ ಬಾವಿ ಯೋಜನೆ	14129	11284	10252	1626

ಅ) ನಿಗಮವು ಚಿಂಚೋಳಿ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಈ ಕೆಳಕಂಡ ಯೋಜನೆಯಲ್ಲಿ ಸಾಲ ವಿತರಣೆ ಮಾಡಿದೆ.

	ಪ.ಜಾ	ಪ.ವರ್ಗ
1. ಸ್ವಯಂ ಉದ್ಯೋಗ ಯೋಜನೆ	308	18
2. ಐ.ಎಸ್.ಬಿ ಯೋಜನೆ	18	00
3. ಭೂ ಒಡೆತನ ಯೋಜನೆ	676	00

ಚಿಂಚೋಳಿ ವಿದಾನಸಭಾ ಕ್ಷೇತ್ರಕ್ಕೆ ವೈಯುಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿ ಪರಿಶಿಷ್ಟ ಜಾತಿ-15, ಪಂಗಡಕ್ಕೆ-5 ಒಟ್ಟು - 20. ಇದಲ್ಲದೆ, ಚಿಂಚೋಳಿಯ ಮಕ್ಕಳ ಮಾರಾಟ ಮಾಡಿ ವೃಧೆಗೆ ಗುರಿಯಾದ ಕುಟುಂಬಂಗಳ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ವಿಶೇಷವೆಂದು ಪರಿಗಣಿಸಿ ಹೆಚ್ಚುವರಿಯಾಗಿ ಗಂಗಾ ಕಲ್ಯಾಣ ಯೋಜನೆಗೆ 44 ಹಾಗೂ ವೈಯುಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆಗೆ -10 ಕೊಳವೆ ಬಾವಿಗಳ ಗುರಿ ನೀಡಿ ಕೊರೆಯಿಸಲಾಗಿದೆ.

ಇ) ನಿಗಮವು ಭೂ ಒಡೆತನ ಯೋಜನೆಯಡಿ ಚಿಂಚೋಳಿ ತಾಲ್ಲೂಕಿನಲ್ಲಿ 1360 ಎಕರೆ 29 ಗುಂಟೆ ಜಮೀನು ಖರೀದಿ ಮಾಡಿದೆ.

ಚಿಂಚೋಳಿ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ನಿಗಮದಿಂದ ಕೊರೆದ ಕೊಳವೆಬಾವಿ

1314(1611) ಶ್ರೀ ಕೈಲಾಸನಾಥ್ ಪಾಟೀಲ್ (ಚಿಂಚೋಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಚಿಂಚೋಳಿ ತಾಲ್ಲೂಕಿಗೆ ಇಲ್ಲಿಯೋವರೆಗೆ ವರ್ಷವಾಗರು ಕೊಳವೆ ಬಾವಿ ಕೊರೆದಿರವುದು ಎಷ್ಟು?

ಆ) ನೀರಾವರಿ ಆದ ಜಮೀನು ಎಷ್ಟು?

ಇ) ಸಾಲ ವಿತರಣೆ ಮಾಡಿರುವ ವಿವರ ನೀಡುವುದು.?

ಶ್ರೀ ಎ.ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಗಂಗಾ ಕಲ್ಯಾಣ ಯೋಜನೆಯನ್ನು 98-99ನೇ ಸಾಲಿನಿಂದ ಕರ್ನಾಟಕ ಹಿಂದುಳಿದ ವರ್ಗಗಳ, ನಿಗಮದಿಂದ ಅನುಷ್ಠಾನಗೊಳಿಸಲಾಗಿದೆ. ಚಿಂಚೋಳಿ ತಾಲ್ಲೂಕಿನಲ್ಲಿ ಕೊರೆದ ಕೊಳವೆ ಬಾವಿಗಳ ವರ್ಷಾವಾರು ವಿವರ ಈ ರೀತಿ ಇವೆ.

ಕ್ರ.ಸಂ.	ವರ್ಷ	ಕೊರೆದ ಕೊಳವೆ ಬಾವಿಗಳ ಸಂಖ್ಯೆ
1.	1998-99	02
2.	1999-2000	-
3.	2000-2001	-
4.	2001-2002	-
	ಒಟ್ಟು:	02

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಚಿಂಚೋಳಿ ತಾಲ್ಲೂಕಿನಲ್ಲಿ ಇಲ್ಲಿಯವರೆವಿಗೂ ಯಾವುದೇ ಕೊಳವೆ ಬಾವಿಯನ್ನು ಕೊರೆದಿರುವುದಿಲ್ಲ.

ಅ) ನೀರಾವರಿಯಾದ ಜಮೀನು ಒಟ್ಟು 15 ಎಕರೆ 38 ಕುಂಟೆ.

ಇ) ಗಂಗಾ ಕಲ್ಯಾಣ ಯೋಜನೆಯಲ್ಲಿ ನೀರಾವರಿ ಸೌಲಭ್ಯವನ್ನು ಉಚಿತವಾಗಿ ಒದಗಿಸಲಾಗಿದೆ. ಚಿಂಚೋಳಿ ತಾಲ್ಲೂಕಿಗೆ 2.53 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ವೈಯುಕ್ತಿಕ ನೀರಾವರಿ ಯೋಜನೆಯಲ್ಲಿ ಘಟಕ ವೆಚ್ಚ 65,000 ರೂ.ಗಳಿಗಿಂತ ಹೆಚ್ಚಾದ ಸಂದರ್ಭದಲ್ಲಿ ಗರಿಷ್ಟ 10,000 ರೂ.ಗಳ ಸಾಲವನ್ನು ನೀಡಲಾಗುತ್ತದೆ. ಚಿಂಚೋಳಿ ತಾಲ್ಲೂಕಿನಲ್ಲಿ ವೈಯುಕ್ತಿಕ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳದಿರುವುದರಿಂದ ಸಾಲ ನೀಡಿರುವುದಿಲ್ಲ.

ಬೆಂಗಳೂರು ನಗರದಲ್ಲಿ ಮಸೀದಿ/ದರ್ಗಾಗಳ ಅಭಿವೃದ್ಧಿ ನೆರವು

1315(1043) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು, (ಶಿವಾಜಿನಗರ) : ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿ 2001-2002ನೇ ಸಾಲಿನಲ್ಲಿ ಯಾವ ಯಾವ ಮಸೀದಿ/ದರ್ಗಾಗಳಿಗೆ ದುರಸ್ತಿ ಹಾಗೂ ಅಬಿವೃದ್ಧಿ ಕಾಮಗಾರಿಗಾಗಿ ವಕ್ಫ್ ಮಂಡಳಿ ನೀಡಿದ ನೆರವೆಷ್ಟು?

ಆ) ಇವುಗಳ ಪೈಕಿ ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿರುವ ಎಷ್ಟು ಮಸೀದಿ/ದರ್ಗಾಗಳಿಗೆ ಮೇಲಿನ ಅವಧಿಯಲ್ಲಿ ನೆರವು ನೀಡಲಾಗಿದೆ?

ಇ) 2002-2003ನೇ ಸಾಲಿನಲ್ಲಿ ಶಿವಾಜಿನಗರದ ವಿಧಾನಸಭಾ ಕ್ಷೇತ್ರದಲ್ಲಿರುವ ಎಷ್ಟು ಮಸೀದಿ/ದರ್ಗಾಗಳಿಗೆ ನೆರವು ನೀಡಲಾಗುತ್ತದೆ?

ಶ್ರೀ ಎಂ.ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ರಾಜ್ಯ ಸಚಿವರು):

ಅ) ಸರ್ಕಾರವು 2001-2002ನೇ ಸಾಲಿನಲ್ಲಿ ಬೆಂಗಳೂರು ನಗರದ 25 ಮಸೀದಿಗಳಿಗೆ ರೂ. 10,25,000/- ಗಳನ್ನು ಹಾಗೂ 1 ದರ್ಗಾ ದುರಸ್ತಿಗಾಗಿ ರೂ. 50,000/- ನೆರವು ನೀಡಿದೆ. (ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.)

ಆ) ಶಿವಾಜಿನಗರದ ಆರ್ಮ್ ಸ್ಟ್ರಾಂಗ್ ರಸ್ತೆಯಲ್ಲಿರುವ ಒಂದು ಸಮೀದಿಯ ದುರಸ್ತಿಗಾಗಿ ರೂ. 25,000/-ಗಳ ನೆರವು ನೀಡಿದೆ. ದರ್ಗಾಗೆ ಸಂಬಂಧಿಸಿದ ಸಹಾಯಾನುಧಾನ ಪ್ರಸ್ತಾವನೆಗಳು ಯಾವುವು ಇರುವುದಿಲ್ಲ.

ಇ) ಪ್ರಸ್ತುತ ಸಾಲಿನಲ್ಲಿ ಶಿರಾಜಿನಗರದ ಕ್ಷೇತ್ರದಲ್ಲಿ ಮಸೀದಿ ದರ್ಗಗಳಿಗೆ ಆರ್ಥಿಕ ನೆರವಿಗಾಗಿ ಸರ್ಕಾರದಲ್ಲಿ ಯಾವುದೇ ಪ್ರಸ್ತಾವನೆಗಳು ಬಾಕಿ ಇರುವುದಿಲ್ಲ. ಮಂಜೂರಾತಿಗಾಗಿ ಪ್ರಸ್ತಾವನೆ ಬಂದನಂತರ ಪರಿಶೀಲಿಸಿ ಅನುದಾನ ಲಭ್ಯತೆ ಅನುಸಾರ ಪರಿಗಣಿಸಲಾಗುವುದು.